

ಸಾರಸ್ವತ ಲೋಕದ ವಿಶಿಷ್ಟ ಜೋಡಿ ಬಿ.ಎನ್‌. ಶ್ರೀರಾಮ್ ಹಾಗೂ ಪದ್ಮಾ ಶ್ರೀರಾಮ್‌

ಬಿಡಾರಂ ಕೃಷ್ಣಪ್ಪನವರ ಕುರಿತು 'ತುಷಾರ' ಪತ್ರಿಕೆಗೆ ಲೇಖನ ಬರೆದೆ. ಕೃಷ್ಣಪ್ಪನವರು, ಪಿಟೀಲು ಚೌಡಯ್ಯನವರು ನನ್ನ ತಂದೆಗೆ ಬಹಳ ಆಪ್ತರಾಗಿದ್ರು. ಚೌಡಯ್ಯನವರನ್ನ ಕುರಿತೂ ಬರೆದೆ. ಇದನ್ನ ಓದಿ ಬಹಳ ಜನ ಪ್ರೀತಿಯಿಂದ ಪ್ರತಿಕ್ರಿಯಿಸಿದ್ದು ಬರವಣಿಗೆಯನ್ನ ನಾನು ಮುಂದುವರೆಸೋಕೆ ಪ್ರೇರಣೆ ಆಯ್ತು. ಮತ್ತು ಈ ಪ್ರೇರಣೆಯಿಂದ 'ಲಂಕೇಶ್ ಪತ್ರಿಕೆ'ಗೆ ನಿಯಮಿತವಾಗಿ ಬರೆಯೋಕೆ ಶುರು ಮಾಡಿದೆ.

ಗಿಡಗಳ ಕುರಿತಾದ ಆಸಕ್ತಿಯಿಂದ ನನಗೆ ಸಿಕ್ಕ ಸ್ನೇಹವಲಯವೂ ದೊಡ್ಡದು. ಗಿಡ, ಹೂಗಳನ್ನು ಅತ್ಯದ್ಭುತವಾಗಿ ಚಿತ್ರಿಸುತ್ತಿದ್ದ ಮದ್ರಾಸಿನ ಮಹಾನ್ ಚಿತ್ರಕಾರ ಓ.ಟಿ. ರವೀಂದ್ರನ್ ಅವರಿಂದ ನನಗೆ ಎಷ್ಟು ಪ್ರೇರಣೆ ಸಿಕ್ಕಿತು ಅನ್ನುವುದನ್ನು ಮಾತಲ್ಲಿ ಹೇಳಲಾರೆ. ಸ್ಕಾಟ್ಲೆಂಡಿನ 'ರಾಯಲ್ ಬೊಟಾನಿಕ್ ಗಾರ್ಡನ್ನಿನ' ಕ್ಯುರೇಟರ್ ಮತ್ತು ಸಸ್ಯ ವರ್ಗೀಕರಣ ಶಾಸ್ತ್ರದಲ್ಲಿ ಪರಿಣಿತರಾದ ಹೆನ್ರಿ ನಾಲ್ಟಿ ಅವರ ಸಂಪರ್ಕ ಇವತ್ತಿನ ತನಕ ನನ್ನನ್ನು ಬೆಳೆಸಿದೆ. ಸಸ್ಯ, ಹೂಗಳ ಛಾಯಾಚಿತ್ರಕಾರರಾದ ಶ್ರೀ ಪರಂಜ್ಯೋತಿ ಅವರು, ನೀಲಗಿರಿಯ ಡಾ. ತರುಣ್ ಛಾಬ್ರಾ ಹೀಗೆ ಇನ್ನೂ ಅನೇಕರು...

**◆ ನೀವು ಕೆಲವಾರು ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದಿರಿ, ಸಾರ್ವಜನಿಕ ಬದುಕಿಗೆ ನೀವು ತೆರೆದುಕೊಂಡ ಬಗ್ಗೆ ಹೇಳಿ.**

ಶ್ರೀರಾಮ್ ಅವರು ಕಾಲೇಜಿನಲ್ಲಿ ಓದುವ ಕಾಲದಲ್ಲಿ ಅವರಿಗೆ ಟಿ.ಎನ್. ನಾಗರಾಜ್ ಅಂತ ಒಬ್ಬ ಮೆಂಟರ್ ಇದ್ರು. ಅವರು ಪ್ರಸಿದ್ಧ ವಕೀಲರಾಗಿದ್ರು. ಅವರ ಮೂಲಕ ರಾಮಮನೋಹರ ಲೋಹಿಯಾ ಅವರ ಪರಿಚಯ ಆಯ್ತು. ಆಗಲೇ ಶ್ರೀರಾಮ್ ಅವರು 'ಸಮಾಜವಾದಿ ಯುವಜನ ಸಭಾ'ದಲ್ಲಿ ಸಕ್ರಿಯರಾಗಿದ್ದರು. ಲೋಹಿಯಾ ಅವರನ್ನು ಓದೋದು, ಚರ್ಚೆ ಮಾಡೋದೆಲ್ಲ ಆ ಕಾಲಕ್ಕೇ ಇತ್ತು... ಲೋಹಿಯಾ ಅವರು ನಾಗರಾಜ್ ಅವರ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರಂತೆ. ಆಗೆಲ್ಲ ಸಮಾಜವಾದಿ ಸಂಘಟನೆಗಳಲ್ಲಿ ತೊಡಗಿಕೊಂಡವರು ಹೋಟೆಲ್‌ಗಳಲ್ಲಿ ತಂಗುತ್ತಿರಲಿಲ್ಲ. ಯಾರದ್ದಾದರೂ ಮನೆಯಲ್ಲಿದ್ದು, ಅವರ ರೀತಿಯಲ್ಲೇ ಹೊಂದಿಕೊಂಡು ಇರುತ್ತಿದ್ದರು.

ಒಮ್ಮೆ ಲೋಹಿಯಾರ ಆಪ್ತರಾಗಿದ್ದ ರೊಮಾ ಮಿತ್ರ ಅವರು ಮೈಸೂರಿಗೆ ಬಂದಿದ್ದಾಗ ನಮ್ಮ ಮನೆಯಲ್ಲಿ ಉಳಿದಿದ್ದರು. ಆಗ ಕೆಲಕಾಲದ ಹಿಂದೆಯಷ್ಟೆ ನಮ್ಮ ಮದುವೆಯಾಗಿತ್ತು. ನನಗೆ ಬರುತ್ತಿದ್ದ ಅಡುಗೆಯಷ್ಟರಲ್ಲೆ ಕೈಮ ಉಂಡೆ, ತುಪ್ಪದನ್ನ ಮಾಡಿದ್ದೆ. ಪ್ರೀತಿಯಿಂದ